MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - SATURDAY 5-2-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಖಾದ್ಯ ತೈಲ ದಾಸ್ತಾನು ಮಿತಿ ಜೂನ್ 30 ರ ತನಕ ವಿಸ್ತರಣೆ

ಸರಕಾರ ಹೊಂದಬಹುದಾದ ಖಾದ್ಯ ತೈಲ, ತೈಲಬೀಜಗಳ ದಾಸ್ತಾನುಮಿತಿಯನ್ನು ಜೂನ್ 30, 2022 ತನಕ ವಿಸ್ತರಿಸಿದೆ. ಇದರನ್ವಯ ಚಿಲ್ಲರೆ ವ್ಯಾಪಾರಸ್ಥರು 30 ಕ್ವಿಂಟಾಲ್ ಖಾದ್ಯ ತೈಲ ಹಾಗೂ 100 ಕ್ವಿಂಟಾಲ್ ತೈಲಬೀಜ ದಾಸ್ತಾನು ಹೊಂದಿರಬಹುದಾಗಿದೆಯೆನ್ನಲಾಗಿದೆ. ರಖಂ ಮಾರಾಟಗಾರರು 500 ಕ್ವಿಂಟಾಲ್ ಖಾದ್ಯತೈಲ ಹಾಗೂ 200 ಕ್ವಿಂಟಾಲ್ ತೈಲಬೀಜಗಳ ದಾಸ್ತಾನು ಹೊಂದಿರಬಹುದೆನ್ನಲಾಗಿದೆ. ಹಾಗೂ ಸರಣಿ ರೀಟೈಲರ್ ಗಳು ಹಾಗೂ ಖಾದ್ಯತೈಲ ತಯಾರಕರಿಗೂ ಮಿತಿ ವಿಧಿಸಲಾಗಿದೆಯೆನ್ನಲಾಗಿದೆ.

## ಕಾಳು ಮೆಣಸು ದರ ಇಳಿಕೆ, ಹೊಸ ಬೆಳೆಯ ಆವಕ

ಹೊಸ ಬೆಳೆಯ ಕಾಳುಮೆಣಸು ಮಾರುಕಟ್ಟೆಗೆ ಆವಕವಾಗುತ್ತಿರುವುದು ಹಾಗೂ ಆಮದು ಪ್ರಮಾಣ ಹೆಚ್ಚಳವಾಗಿರುವುದು ಕಾಳುಮೆಣಸಿನ ದರ ಇಳಿಕೆಗೆ ಕಾರಣವೆನ್ನಲಾಗುತ್ತಿದೆ. ಅಕ್ಟೋಬರ್ 2021 ರ ನಂತರ ಹೆಚ್ಚಳ ಕಂಡಿದ್ದ ಕಾಳುಮೆಣಸು ದರ ನಂತರ ಇಳಿಕೆಯಾಗಲಾರಂಭಿಸಿತ್ತು. ಈಗ ಬೇಡಿಕೆ ಇಳಿಕೆಯಾಗಿರುವುದೂ ದರ ಇಳಿಕೆಗೆ ಕಾರಣವೆನ್ನಲಾಗಿದೆ. ವಿಯೆಟ್ನಾಂ ಮತ್ತಿತರ ದೇಶಗಳಿಂದ ನಿರಂತರ ಆಮದಾಗಿ ಕಾಳುಮೆಣಸು ಲಭ್ಯತೆ ಮಾರುಕಟ್ಟೆಯಲ್ಲಿ ಹೆಚ್ಚಳಗೊಂಡಿರುವುದರಿಂದ ದರ ಇಳಿಕೆಯಾಗಿದೆ. ಹೊಸ ಬೆಳೆಯ ಉತ್ಪಾದನೆ ಭಾರತದಲ್ಲಿ ಹೆಚ್ಚಳವಿದೆಯೆನ್ನಲಾಗಿದೆ. ಆದರೆ ಈ ಹೆಚ್ಚಳ ಅಂದಾಜಿನ ಲೆಕ್ಕಾಚಾರಕ್ಕಿಂತ ಉತ್ಪಾದನೆ ಕಡಿಮೆಯಾಗುವ ಸಂಭವವೇ ಹೆಚ್ಚಳ. ವಿಯೆಟ್ನಾಂ ಮತ್ತಿತರ ದೇಶಗಳಲ್ಲೂ ಹೊಸ ಬೆಳೆ ಹಿಂದಿನೆರಡು ವರ್ಷಗಳಿಂತ ಗಣನೀಯ ಕಡಿಮೆಯೆನ್ನಲಾಗಿದೆ. ಅಂತರಾಷ್ಟ್ರೀಯ ಬೇಡಿಕೆ ಹೆಚ್ಚಳವಾಗಿ ಅಲ್ಲಿ ಕಾಳುಮೆಣಸು ಲಭ್ಯತೆ ಕಡಿಮೆಯಾದಾಗ ದರ ಉತ್ತಮಗೊಳ್ಳಬಹುದು. ಮುಂದಿನೆರಡು ತಿಂಗಳಲ್ಲಿ ದೇಶೀ ಕಟಾವು ಪೂರ್ಣಗೊಂಡು ದೇಶೀ ಕಾಳುಮೆಣಸು ಲಭ್ಯತೆಯ ಚಿತ್ರಣ ದೊರಯಬಹುದು. ರೈತರು ದರವನ್ನು ಗಮನಿಸುತ್ತಿದ್ದು ಇಳಿಕೆ ದರದಲ್ಲಿ ಹೆಚ್ಚು ಮಾರಾಟ ಮಾಡುತ್ತಿಲ್ಲ. ಮುಂದಿನ ಕೆಲವು ತಿಂಗಳ ನಂತರ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಂಭವವಿದ್ದು ದರ ಹಿಂದಿನಷ್ಟು ಇಳಿಕೆಯಾಗುವ ಸಂಭವ ಕಡಿಮೆ ಪೂರೈಕೆ ಇಳಿಕೆಯಾದಲ್ಲಿ ದರ ಹೆಚ್ಚಳವಾಗುವ ಸಂಭವವಿದೆ.